ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 4233/2023

ಸಿ.ಡಬ್ಲ್ಯೂ-02
ಪಿ.ಡಬ್ಲ್ಯೂ-02

<u>ಸಾಕ್ಷಿಗೆ ದಿಃ **2.09.2024** ರಂದು ಪ್ರಮಾಣ ವಚನ ಬೋದಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀಮತಿ ಜಿ.ಆರ್.ಕೆ. ವಕೀಲರಿಂದಃ</u>**

3 ಜನ ಸಿಬ್ಬಂದಿ ಗಸ್ತು ಮಾಡಲು ನೇಮಕವಾಗಿದ್ದೇವು. ಚಾಸಾ.1, 3 ಮತ್ತು ನಾನು ಗಸ್ತು ಕರ್ತವ್ಯಕ್ಕೆ ನೇಮಕವಾಗಿದ್ದೇವು. ಹು.ದುರ್ಗ ಹೋಬಳಿಯಲ್ಲಿಅಧಿಕಾರಿಗಳೊಂದಿಗೆ ನಾವು 3 ಜನ ಒಟ್ಟಿಗೆ ಗಸ್ತು ಮಾಡುತ್ತಿದ್ದೆವು.  ನಾವು ಚಾ.ಸಾ. 6 ಅವರೊಂದಿಗೆ ಗಸ್ತು ಮಾಡುತ್ತಿದ್ದೇವು. ಮಾಹಿತಿ ಚಾಸಾ. 6 ಅವರಿಗೆ ಬಂದಿದ್ದು ನನಗೆ ಯಾವ ರೀತಿ ಬಂದಿರುತ್ತದೆ ಎಂದು ಗೊತ್ತಿಲ್ಲ.  ನಾವು ಕೇಂದ್ರ ಸ್ಥಾನವನ್ನು 9.45 ಗಂಟೆಗೆ ಬಿಟ್ಟಿರುತ್ತೇವೆ. ಚಾಲಕನನ್ನು ಸೇರಿಸಿ ಒಟ್ಟು 5 ಜನ ಹೊರಟಿರುತ್ತೇವೆ.

ಸರಕಾರಿ ವಾಹನ ಸಂಖ್ಯೆ ಕೆ.ಎ 06-ಜಿ. 0867 ನೇದರಲ್ಲಿ ಹೊರಟಿರುತ್ತೇವೆ. ನಾವು ಯಾವ ಮಾರ್ಗದ ಮೂಲಕ ಹೊರಟಿದ್ದೇವು ಎಂದುನನಗೆ ನೆನಪಿಲ್ಲಿ  ಆ ದಿನ ಘಟನಾ ಸ್ಥಳದಲ್ಲಿ ಮಾತ್ರ ದಾಳಿ ಮಾಡಿರುತ್ತೇವೆ.  ದಾಳಿಗೆ ಹೋಗುವ ಮೊದಲು ಬಾತ್ಮಿ ಬಂದ ನಂತರ ನಾವು ಡೈರಿಯಲ್ಲಿ  ನಮೂದು ಮಾಡುತ್ತೇವೆ ಎಂದರೆ ಸರಿ.ಸದರಿ ಡೈರಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾವು ಕೇಂದ್ರ ಸ್ಥಾನವನ್ನು 9.45 ಗಂಟೆಗೆ ಬಿಟ್ಟು ಸ್ಥಳವನ್ನು 10.15 ಗಂಟೆಗೆ ತಲುಪಿರುತ್ತೇವೆ. ಸ್ಥಳದಲ್ಲಿ ವಾಹನ ಮತ್ತು ಜನ ಸಂಚಾರ ಇತ್ತು.

ಸಾರ್ವಜನಿಕರು ಇಲ್ಲದ ಕಾರಣ ಮತ್ತು ಒಪ್ಪದೆ ಇರುವ ಕಾರಣ ನಮ್ಮನ್ನು ಪಂಚರಾಗಿ ನೇಮಕ ಮಾಡಿರುತ್ತಾರೆ. ಪಂಚನಾಮೆಯಲ್ಲಿ ಯಾರನ್ನು ವಿಚಾರಿಸಿದ್ದೇವೆಂದು ನಮೂದು ಇರುವುದಿಲ್ಲ. ನಮಗೆ ಅಧಿಕಾರಿಗಳು ನೋಟಿಸ್ ನೀಡಿದ್ದರು. ಸದರಿ ನೋಟಿಸ್ ನ ಪ್ರತಿ ನ್ಯಾಯಾಲಯದ ಮುಂದೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಹಜರ್ ಸಮಯದಲ್ಲಿ ಸಿಲವರ್ ಕಲರ್ ದ್ವಿ ಚಕ್ರವಾಹನ ಫೋಟೋ ತೆಗೆದ ಬಗ್ಗೆ ನನಗೆ ನೆನಪಿಲ್ಲ. ಸದರಿ ವಾಹನ ಮಾಲಿಕರು ಯಾರೆಂದು ಬರೆದಿರುವುದಿಲ್ಲ.

ನಮ್ಮ ಅಧಿಕಾರಿಗಳು ಅಳತೆ ಮಾಡಲು ಟೇಪ್ ಅನ್ನು ತಂದಿದ್ದರು. ಟೇಪ್ ನಿಂದ ಅಳತೆ ಮಾಡಿರುವ ಬಗ್ಗೆ ನನ್ನ ಹೇಳಿಕೆ ಮತ್ತು ಪಂಚನಾಮೆಯಲ್ಲಿ ಹೇಳಿರುತ್ತೇನೆ. ಬಿಳಿ ಪ್ಲಾಸ್ಟಿಕ್ ಕ್ಯಾನ್ ನ್ಯಾಯಾಲಯದ ಮುಂದೆ ಇರುವುದಿಲ್ಲ ಅದನ್ನು ಪಂಚನಾಮೆಯ ಸಮಯದಲ್ಲಿ ವಶವಡಿಸಿಕೊಂಡಿರುತ್ತೇವೆ. ಬಿಳಿ ಚೀಲವನ್ನು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮು. ಮಾ. ನ ಮೇಲಿರುವ ಮೊಹರಿನಿಂದಲೇ ನಾವು ಸೀಲ್ ಮಾಡಿರುತ್ತೇವೆ. ನ್ಯಾಯಾಲಯದ ಮುಂದಿರುವ ಬಾಟಲ್ ಗೆ ನಾವು ಸೆಂದಿಯನ್ನು ರಾಸಾಯನಿಕ ಪರೀಕ್ಷೆಗೆ ಹಾಕಿರುತ್ತೇವೆ.

ಮು. ಮಾ. ಗಳ ಮೇಲೆ ಸಹಿ ಹೊರತನ್ನು ಹೊರತು ಪಡಿಸಿ ವಿಶಿಷ್ಟ ಗುರುತನ್ನು ಹಾಕಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮು. ಮಾ. ಗಳಂತಹ ಬಾಟಲ್ ಗಳು ಸಾಮಾನ್ಯವಾಗಿ ಎಲ್ಲ ಅಂಗಡಿಗಳಲ್ಲಿ ಸಿಗುತ್ತೆವೆ ಎಂದರೆ ಸರಿ. ನಾನು ಯಾವತ್ತು ಸಹ ದಾಳಿಗೆ ಹೋಗಿಲ್ಲ ಪಂಚನಾಮೆಗೆ ಸಹಿ ಮಾಡಿಲ್ಲ ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ಸುಳ್ಳು ಕೇಸನ್ನು ದಾಖಲು ಮಾಡಿದ್ದು ಆರೋಪಿತನಿಗೂ ಮು. ಮಾ. ಗಳಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿಯಲ್ಲ. ಆರೋಪಿ ದ್ವಿ ಚಕ್ರವಾಹನ ಮಾಲಿಕ ಆಗಿರುವುದಿಲ್ಲ ಆತನ ವಿರುದ್ದ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.